ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯದಲ್ಲಿ, ತರೀಕೆರೆ.

ಸಿಸಿ ನಂಬರ **34/2024**

| | | | |
|---|---|---|---|
| ಸಾಕ್ಷಿಯ ಹೆಸರು | : ಮಂಜಪ್ಪ | ಸಿ.ಡಬ್ಲ್ಯು | 8 |
| ತಂದೆಯ ಹೆಸರು | : ದುರ್ಗಪ್ಪ | ಪಿ.ಡಬ್ಲ್ಯು | 13 |
| ವಯಸ್ಸು | : 54 ವರ್ಷ | | |
| ಉದ್ಯೋಗ | : ಸಿ ಪಿ ಐ ಕಾರ್ಕಳ | | |
| ವಾಸ ಸ್ಥಳ | : ಕಾರ್ಕಳ | | |

ದಿನಾಂಕಃ**17-09-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು

ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

ನಾನು ಈ ಹಿಂ ದೆ ಉಡುಪಿ ನಗರ ಪೊಲೀಸ್ ಠಾಣಾ  ಪಿ ಐ ಆಗಿ ದಿನಾಂಕ 12-12-2022 ರಿಂ ,ದ 29-02-24 ರವರೆಗೆ ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿ ದಿನಾಂಕ 09-10-23 ರಂದು ನಗರ ಪೊಲೀಸ್ ಠಾಣಾ ಗುನ್ನಾ ನಂಬರ 147 /23 ರ ಪ್ರಕರಣದ ಕಡತವನ್ನು ಚಾಸಾ-4 ರವರಿಂದ ಪಡೆದುಕೊಂಡು ಪರಿಶೀಲನೆ ಮಾಡಿ ತನಿಖೆಯನ್ನು ಮುಂದುವರೆಸಿರುತ್ತೇನೆ. ಸದರಿ ಪ್ರಕರಣದಲ್ಲಿ ಕಳ್ಳತನವಾದ ವಸ್ತುಗಳು ಮತ್ತು ಆರೋಪಿಯ ಪತ್ತೆಗಾಗಿ ಚಾಸಾ-5 ಮತ್ತು ಇತರೆ 6 ಸಿಬ್ಬಂದಿಗಳೊಂದಿಗೆ ಒಂದು ವಿಶೇಷ ತನಿಖಾ ತಂಡವನ್ನು ರಚಿಸಿದ್ದೇ ನೆ. ದಿನಾಂಕ 31-10-23 ರಂದು ಚಾಸಾ-5 ರವರು ಸಂಜೆ 6 ಗಂಟೆ ಸಮಯದಲ್ಲಿ ಒಬ್ಬ ಆಸಾಮಿ ಮತ್ತು ಆತನಿಂದ ವಶಪಡಿಸಿಕೊಂಡ ಒಂದು ಕಾರು ಹಾಗೂ ವಿವಿದ ಸ್ಥಳಗಳಲ್ಲಿ ಕಳ್ಳತನ ಮಾಡಿದ ಬಂಗಾರ ಮತ್ತು ಬೆಳ್ಳಿ ವಸ್ತುಗಳನ್ನು ಹಾಜರುಪಡಿಸಿರುತ್ತಾರೆ. ಆ ಪ್ರಕಾರ ಆರೋಪಿಯನ್ನು ಹೆಚ್ಚಿನ ತನಿಖೆಗೆ ಒಳಪಡಿಸಿ ಆತನ ಸ್ವ ಇಚ್ಚಾ ಹೇಳಿಕೆ ಪಡೆದುಕೊಂಡು ಕಡತಕ್ಕೆ ಅಳವಡಿಸಿದ್ದೇನೆ. ಅದೇ ದಿನ ಠಾಣೆಯಲ್ಲಿ ಸಂಜೆ 6.15 ರಿಂದ 8.15 ರ ಮಧ್ಯದಲ್ಲಿ ಆರೋಪಿಯ ಬಳಿ ಇದ್ದ ಒಡವೆಗಳನ್ನು ಕೃತ್ಯಕ್ಕೆ ಬಳಸಿದ ಕಾರು ಸಹಿತ ಪಂಚನಾಮೆ ಜರುಗಿಸಿ ನನ್ನ ವಶಕ್ಕೆ ಪಡೆದಿದ್ದೇನೆ ಮತ್ತು ಆ ಬಗ್ಗ ಪಿ ಎಫ್ ವರದಿ ಸಲ್ಲಿಸದ್ದೇನೆ. ಆರೋಪಿ ತನಿಖೆಯ ಸಮಯದಲ್ಲಿ ಈ ಪ್ರಕರಣಕ್ಕೆ ಸಂಬಂಧಿಸಿದ ಕಾರನ್ನು ತರೀಕೆರೆ ನಗರದಿಂದ ಕಳ್ಳತನ ಮಾಡಿ ತಂದಿರುವುದಾಗಿ ಒಪ್ಪಿಕೊಂಡ ಕಾರಣ ಸದರಿ ಕಾರನ್ನು ಪರಿಶೀಲನೆ ಮಾಡಿದ್ದೇನೆ. ಕಾರಿನ ನೋಂದಣಿ ಸಂಖೆ ಕೆ ಎ 26 ಎನ್ 4539 ಎಂದು ಇರುತ್ತದೆ. ಆದರೆ ಕಾರಿನ ಒಳಗೆ ಎರಡು ನಂಬರ ಪ್ಲೇಟುಗಳು ಕೂಡಾ ಇದ್ದವು. ಅವುಗಳ ನೋಂದಣಿ ಸಂಖೆ ಕೆ ಎ 51 ಎಂ ಎಲ್ 0835 ಆಗಿತ್ತು. ಅದೇ ಕಾರಿನ ನಿಜವಾದ ನಂಬರ ಎಂದು ಗೊತ್ತಾಯಿತು. ತರೀಕೆರೆ ಪೊಲೀಸ್ ಠಾಣೆಗೆ ಈ ಬಗ್ಗ ನನ್ನ ಮಾಹಿತಿಯನ್ನು ನೀಡಿರುತ್ತೇನೆ. ದಸ್ತಗಿರಿ ನಿಯಮ ಅನುಸರಿಸಿ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಮಾಡಿದ್ದೇನೆ. ನಮ್ಮ ಕೇಸಿಗೆ ಸಂಬಂಧಿಸಿದ ದಾಖಲಾತಿಗಳನ್ನು ತರೀಕೆರೆ ಪೊಲೀಸ್ ಠಾಣೆಗೆ 02-11-2023 ರಂದು ನೀಡಿರುತ್ತೇನೆ. ದಿನಾಂಕ 05-12-23 ರಂದು ಮಾನ್ಯ ನ್ಯಾಯಾಲಯದ ಆದೇಶದಂತೆ ಕಾರನ್ನು ಚಾಸಾ-1 ರವರ ಮಧ್ಯಂತರ ವಶಕ್ಕೆ ಬಿಟ್ಟು ಕೊಟ್ಟಿದ್ದೇನೆ. ಚಾಸಾ-5 ರವರು

ನೀಡಿದ ವರದಿಯನ್ನು ಈಗಾಗಲೇ ನಿಪಿ.24 ಎಂದು ಗುರುತಿಸಲಾಗಿದೆ. ಅಮಾನತು ಪಂಚನಾಮೆಯನ್ನು ನಿಪಿ.25 ಎಂದು ಈಗಾಗಲೇ ಗುರುತಿಸಲಾಗಿದೆ. ಸಾಕ್ಷಿ ನಿಪಿ.26 ಅನ್ನು ನೋಡಿ ಗುರುತಿಸುತ್ತಾರೆ, ಸಹಿಯನ್ನು ನಿಪಿ.26 ಬಿ ಎಂದು ಗುರುತಿಸಲಾಯಿತು. ಆರೋಪಿಯನ್ನು ವಿ ಸಿ ಮೂಲಕ ನೋಡಿ ಗುರುತಿಸುತ್ತೇನೆ. ಕಾರನ್ನು ನೋಡಿದರೆ ಗುರುತಿಸುತ್ತೇನೆ. ನಮ್ಮ ಠಾಣಾ ಮಾ.ಪಟ್ಟಿ ಸಂಖ್ಯೆ 154/23 ರ ಕ್ರಮ ಸಂಖ್ಯೆ 2 ಮತ್ತು 50 ವಸ್ತುಗಳು ಈ ಪ್ರಕರಣಕ್ಕೆ ಸಂಬಂಧಿಸಿರುತ್ತವೆ.

<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>

ನಾನು ಉಡುಪಿ ಪೊಲೀಸ್ ಠಾಣೆಯ ಮೇಲೆ ಹೇಳಿದ ಪ್ರಕರಣದಲ್ಲಿ ಯಾವುದೇ ತನಿಖೆಯನ್ನು ನಡೆಸಿಲ್ಲ ಎಂದರೆ ಸರಿಯಲ್ಲ. ಚಾಸಾ-5 ನನ್ನ ಮುಂದೆ ಆರೋಪಿಯನ್ನು ಹಾಜರು ಮಾಡಿಲ್ಲ, ಆರೋಪಿಯು ನನ್ನ ಮುಂದೆ ಯಾವುದೇ ತರಹದ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಆತನ ವಶದಿಂದ ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಕಲಿ ನಂಬರ ಪ್ಲೇಟುಗಳನ್ನು ಕೂಡಾ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದ ಮುದ್ದೆ ಮಾಲುಗಳನ್ನು ವಶಪಸಿಡಿಸಿಕೊಂಡಿದ್ದೇನೆ ಎಂದು ಮತ್ತು ತರೀಕೆರೆ ಪೊಲೀಸ್ ಠಾಣೆಗೆ ವರದಿಯನ್ನು ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಪಂಚನಾಮೆ ಮಾಡಿಲ್ಲ ಮತು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮುದ್ದೆ ಮಾಲಿಗೂ ಕೂಡಾ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆ :</u> ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ
ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.